ಇ) ಸರ್ಕಾರಿ ಆದೇಶ ಸಂಖ್ಯೆ ಹೆಚ್ಯುಡಿ 352 ಕೆಹೆಚ್ಬಿ 92, ದಿನಾಂಕ 21-10-93ರಲ್ಲಿ ಕರ್ನಾಟಕ ಗೃಹ ಮಂಡಳಿಗೆ ವಹಿಸಿದ್ದ 40,000 ಆಶ್ರಯ ಮನೆಗಳ ಪೈಕಿ 24,944 ಮನೆಗಳನ್ನು ವಾಪಸ್ಸು ಪಡೆದು ಜಿಲ್ಲಾಧಿಕಾರಿಗಳಿಗೆ ನಿರ್ಮಾಣ ಮಾಡಲು ವಹಿಸಲಾಗಿದೆ. ಬಾಕಿ 15,056 ಮನೆಗಳ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿದೆ. ಇವುಗಳಲ್ಲಿ ಫೆಬ್ರುವರಿ 1994ರ ಅಂತ್ಯಕ್ಕೆ 6,233 ಮನೆಗಳು ಪೂರ್ಣಗೊಂಡಿವೆ. ಉಳಿದ 8,823 ಮನೆಗಳು ಪ್ರಗತಿಯ ವಿವಿಧ ಹಂತದಲ್ಲಿವೆ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವತಿಯಿಂದ ಮನೆಗಳ ಹಂಚಿಕೆ

620 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಹಂಚಿಕೆದಾರರಿಗೆ ಪೂರ್ಣ ನಾಗರೀಕ ಸೌಲಭ್ಯಗಳನ್ನೊಳಗೊಂಡ ಎಷ್ಟು ಮನೆಗಳು ಹಂಚಿಕೆಯಾಗಬೇಕಾಗಿರುವುದು?*

ಆ) *ಈವರೆಗೆ ಎಷ್ಟು ಹಂಚಿಕೆಯಾಗಿರುವುದು ಮತ್ತು ಹಂಚಿಕೆಯಾಗದೇ ಉಳಿದಿರುವುದು ಎಷ್ಟು?*

ಇ) *ಅವುಗಳ ಹಂಚಿಕೆಯಾಗದಿರುವುದಕ್ಕೆ ಕಾರಣವೇನು ಮತ್ತು ಎಷ್ಟು ದಿನಗಳಲ್ಲಿ ಹಂಚಿಕೆ ಪೂರ್ಣಗೊಳಿಸಲಾಗುವುದು?*

ಶ್ರೀ ಗೋಪಿನಾಥ್ ಆರ್. ಸಾಂದ್ರ (ವಸತಿ ಸಚಿವರು) :

ಅ)

ಕ್ರ. ಸಂ.	ವಿಭಾಗ	ದಿನಾಂಕ 1.4.92 ರಿಂದ 31.3.93 ರವರೆಗೆ ಹಂಚಿಕೆಯಾದ ಮನೆಗಳ ಸಂಖ್ಯೆ	ದಿನಾಂಕ 1.4.98 ರಿಂದ ಇಂದಿನವರೆಗೆ ಹಂಚಿಕೆಯಾದ ಮನೆಗಳ ಸಂಖ್ಯೆ
1.	ಮೆಟ್ರೋ-1	182	1920
2.	ಮೆಟ್ರೋ-2	760	594
3.	ಬಳ್ಳಾರಿ	253	179
4.	ಗುಲ್ಬರ್ಗಾ	66	298
5.	ಹಾಸನ	153	57
6.	ಹುಬ್ಬಳ್ಳಿ	1136	49
7.	ಬೆಳಗಾಂ	198	70
8.	ಮಂಗಳೂರು	208	35
9.	ಮೈಸೂರು	472	1561
10.	ಶಿವಮೊಗ್ಗ	566	126
	ಒಟ್ಟು	**3994**	**4889**

ಇ) ಅರ್ಜಿಗಳು ಬಂದಂತೆ ಖಾಲಿ ಇರುವ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ.